ಋತುರಾಜನ ಕಾಲೀಗ ನೆಲದ ಮೇಲಿರಲಿಲ್ಲ. ಅವನೀಗ ಕೈಯಿಟ್ಟದ್ದೆಲ್ಲ ಭಸ್ಮವಾಗುವ ಭಸ್ಮಾಸುರನಂತೆ ಬೇಲಿ ಹಾಕಿದ್ದೆಲ್ಲ ಸ್ವಂತವಾಗುವ ನುಂಗಾಸುರನಾಗಿದ್ದ.

ಇವೆಲ್ಲದರ ನಡುವೆ ಅವನಿಗೆ ಬದುಕೇ ಬದಲಾಗುವಂಥ ಉಪಾಯ ಹೊಳೆದಿದ್ದು ಚುನಾವಣೆ ಬಂದಾಗ. ಎಲೆಕ್ಷನ್ ಎನ್ನುವುದು ಬಣಗಲು ಗ್ರಾಮಕ್ಕೆ ಸಾವಿರ ಕಾಲುಗಳ ಮೇಲೆ ಬರುತ್ತದೆ. ಇಷ್ಟು ದಿನ ಒಟ್ಟಾಗಿದ್ದ ಜನರೆಲ್ಲ ಚುನಾವಣೆ ಘೋಷಣೆಯಾದೊಡನೆಯೇ ನಿಂತ ನಿಂತಲ್ಲೇ ಎರಡು ಗುಂಪುಗಳಾಗಿ 'ಜನಹಿತ ಪಕ್ಷ' ಹಾಗೂ 'ಅಭಿವೃದ್ಧಿ ಪಕ್ಷ'ಗಳ ಕಾರ್ಯಕರ್ತರಾಗಿಬಿಡುತ್ತಾರೆ. ಬಾವುಟಗಳು ಹಾರುತ್ತವೆ. ಬಣಗಲಿನ ಮೇಲಿನ ಅಕಾಶದಲ್ಲಿ ತೇಲುವ ಮೋಡಗಳೂ ಅರೆ ಕ್ಷಣ ನಿಂತು ತಮ್ಮ ಪಕ್ಷಕ್ಕೊಂದು ಜೈಕಾರ ಕೂಗಿ ಹೋಗುವಷ್ಟು ಜೋರಾಗಿ ಪ್ರಚಾರ ಮಾಡಲಾಗುತ್ತದೆ.

ಇಂತಪ್ಪ ಬಣಗಲಿಗೆ ಮೂರನೆಯ ಪಕ್ಷವಾಗಿ ಎಂಟ್ರಿ ಕೊಟ್ಟದ್ದು ಗ್ರಾಮ ಪಕ್ಷ. ಕಳೆದ ಚುನಾವಣೆಯಲ್ಲಿ ಸೋತರೂ ಮತಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡಿದ್ದ ಜಗದೀಶರಿಗೆ ಈ ವರ್ಷ ಗೆಲ್ಲುವ ನಿರೀಕ್ಷೆ ಹೆಚ್ಚಾಗಿತ್ತು. ಗ್ರಾಮದ ಸರಹದ್ದಿನೊಳಗೆ ಸದ್ದಿಲ್ಲದೇ ಸರಿದುಹೋಗುವ ಬೇಲಿ ಜಗಳ, ದಾಯಾದಿ ಮತ್ಸರ, ಮರಳು ಗಲಾಟೆಗಳಂಥ ಒಳಕದನಗಳನ್ನು ಬಗೆಹರಿಸಿ ಎರಡೂ ಕಡೆ ನ್ಯಾಯ ಮಾಡಿಸುವ ಮೂಲಕ ಅವರು ಜನರ ಅಂತರಂಗದ ಮತ ಯಂತ್ರದಲ್ಲಿ ತಮ್ಮ ಪಕ್ಷದ 'ಕತ್ತಿ'ಯ ಗುರುತನ್ನು ಗಟ್ಟಿಯಾಗಿಯೇ ಒತ್ತಿದ್ದರು.

ಆದರೆ ಮತದಾರ ಇಷ್ಟಕ್ಕೇ ಒಲಿಯುವುದಿಲ್ಲ ಎನ್ನುವುದು ಅವರಿಗೂ ಗೊತ್ತಿತ್ತು. ಜನರ ನೆನಪಿನ ಶಕ್ತಿ ದುರ್ಬಲ. ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ಅವರ ಸ್ಮರಣೆಯಿಂದ ಬೇಗ ಹಾರಿಹೋಗುತ್ತದೆ. ಸಮಯ ಬಂದಾಗ ಮಾತ್ರೆ ಕೊಟ್ಟು ಎಲ್ಲವನ್ನೂ ನೆನಪಿಸಬೇಕು. ಗರಿಗರಿ ನೋಟು! ಚುನಾವಣೆಗೆ ಮುನ್ನ ಐನೂರರ ನೋಟುಗಳು ಅವರ ಜೇಬು ಸೇರಬೇಕು. ಅದರಲ್ಲೂ ಈವರೆಗೆ ಗೆದ್ದೂ ಗೆದ್ದೂ ಮನಸ್ಸಿನಲ್ಲಿ ಅಚ್ಚೊತ್ತಿರುವ ಹಳೆಯ ಪಕ್ಷಗಳ ಮರೆಸಲಿಕ್ಕೆ ಒಂದು ನೋಟು ಹೆಚ್ಚೇ ಕೊಡಬೇಕು!

ಹೀಗೆ ಜಗದೀಶರು ಬಣಗಲು ಗ್ರಾಮವನ್ನು ಇಡಿಯಾಗಿ ತೆಕ್ಕೆಗೆ ತೆಗೆದುಕೊಳ್ಳಬಲ್ಲ ಸೇನಾಧಿಪತಿಗಾಗಿ ಹುಡುಕುತ್ತಿದ್ದ ಸಮಯವನ್ನು ಸದುಪಯೋಗ ಮಾಡಿಕೊಂಡವನು ಋತುರಾಜ. ಗ್ರಾಮದಲ್ಲಿ ಬೀಸುತ್ತಿರುವ ಚುನಾವಣಾ ಗಾಳಿಯಲ್ಲಿ ಉಸಿರಾಡಿದವನಿಗೆ ಈ ಬಾರಿ ಜಗದೀಶರು ಗೆಲ್ಲೋದು ಪಕ್ಕಾ ಅನಿಸಿತ್ತು. ಗೆಲುವು ಖಾತ್ರಿಯಿರುವ ಪಕ್ಷದ ಸೇನಾಧಿಪತಿಯಾಗುವುದು ಎಷ್ಟೆಲ್ಲ ರೀತಿಯಿಂದ ಲಾಭಕರ ಎನ್ನುವುದನ್ನು ಎಣಿಸಿ ಎಣಿಸಿಯೇ ಅವನ ಮನಸ್ಸಿನ ಕ್ಯಾಲ್ಕ್ಯುಲೇಟರ್ ಪುಳಕಗೊಂಡಿತ್ತು. ಈ ಮೊದಲೇ ಜಗದೀಶರ ಮನಸ್ಸಿನಲ್ಲಿ ಬೇಯಿಸಿಟ್ಟಿರುವ ವಿಶ್ವಾಸದ ಅಕ್ಕಿಗೆ ಒಂದಿಷ್ಟು ಮಸಾಲೆ ಅರೆದರಾಯಿತು. ಬಣಗಲು ಪ್ರಚಾರದ ನಾಯಕತ್ವ ತನ್ನದೇ!

ಅವನ ನಂಬಿಕೆಯೇನೂ ಹುಸಿ ಹೋಗಲಿಲ್ಲ. ತನ್ನಿಂದ ಪ್ರಯೋಜನ ಪಡೆದ ಮನುಷ್ಯನಿಗಿಂತ ಹೆಚ್ಚು ನಂಬಿಕೆಗೆ ಅರ್ಹ ಇನ್ನೊಬ್ಬನಿಲ್ಲ. ಹಾಗಂದುಕೊಂಡೇ ಜಗದೀಶರು ಬಣಗಲಿನ ಪ್ರಚಾರದ ಜವಾಬ್ದಾರಿಯನ್ನು ಋತುರಾಜನಿಗೆ ಕೊಟ್ಟರು. ಅದರ ಜೊತೆಗೇ ಬಂದಿದ್ದು ತುಂಬು ಬ್ಯಾಗಿನ ನೋಟುಗಳು!

ಋತುರಾಜ ಹತ್ತಾರು ಡುಮ್ಕಿಗಳ ಬಳಿಕ ಎಸ್ಸೆಸ್ಸೆಲ್ಸಿ ಪಾಸಾದ ವಿದ್ಯಾರ್ಥಿಯಂತೆ ಕುಣಿಯುತ್ತ ಮನೆಗೆ ಬಂದ. ಮನೆಯೆದುರು ನಿಂತು ನೋಡಿದವನಿಗೆ ಇಡೀ ಬಣಗಲು ಗ್ರಾಮವೇ ತನ್ನ ಬೇಲಿಗೆ ಸಿಕ್ಕಿಕೊಂಡ ಒತ್ತುವರಿ ಜಮೀನಿನಂತೆ ಕಂಡಿತು.

* * *

ಬಣಗಲಿನಲ್ಲಿ ಚುನಾವಣಾ ಹವಾಮಾನ ನಲವತ್ತು ಡಿಗ್ರಿ ಸೆಲ್ಸಿಯಸ್‌ಗೆ ಏರಿತು. ಅರ್ಧ ಕೆಜಿ ಟೊಮೆಟೊ ಕೊಳ್ಳಲೋ, ಕೊತ್ತಂಬರಿ ಸೊಪ್ಪು ತರಲೋ ಹೊರಗೆ ಬರುತ್ತಿದ್ದ ಜನಸಾಮಾನ್ಯರಿಗೆ ದಾರಿಯಲ್ಲಿ ಸಿಗುತ್ತಿದ್ದ ಚುನಾವಣಾ ಪ್ರಚಾರಕರು ದೇಶಾವರಿ ನಗೆ ಬೀರುತ್ತಿದ್ದರು. ಕಷ್ಟಪಟ್ಟು ಏರು ಹತ್ತುವ ಅಜ್ಜಿಯರನ್ನೂ ಅಡ್ಡಗಟ್ಟಿ 'ಕುಂದಕ್ಕೋಯ್', ಈ ಸಲ

